# ಪ್ರಜಾಪ್ರಭುತ್ವ ನಿಜ ದರ್ಶನ

ರಾಜಕಾರಣವೆಂಬುದು ವರ್ತಮಾನದ ಆಗುಹೋಗುಗಳ ಮೇಲೆ ನಡೆಯಬೇಕಾಗಿರುವುದೇ ಹೊರತು, ಅದು ಭೂತಕಾಲದಲ್ಲಿ ನಡೆದ ಘಟನೆಗಳನ್ನು ವರ್ತಮಾನದ ಸಮಸ್ಯೆಗಳಿಗೆ ಕಾರಣ ಎಂದು ಬಿಂಬಿಸುವುದರಲ್ಲಿ ಅಲ್ಲ. ಈ ರೀತಿ ಇತಿಹಾಸದ ಹಿಂದೆ ಅವಿತುಕೊಳ್ಳುವುದು ವರ್ತಮಾನದ ಸಮಸ್ಯೆಗಳನ್ನು ಮರೆಮಾಚಿದಂತೆ. ಸಮಾಜ ಹೇಗೆ ಬದಲಾಗುತ್ತಿರುತ್ತದೋ, ಹಾಗೆಯೇ ಇತಿಹಾಸವೂ ಬದಲಾಗುತ್ತಿರುತ್ತದೆ. ಬಲಿಷ್ಠ ದೇಶಗಳ ಯುದ್ಧ ದಾಹ, ಹಿಂಸೆಯ ಭೀಕರತೆ, ಜನಾಂಗೀಯ ದ್ವೇಷ, ಸರ್ವಾಧಿಕಾರಿ ಶಕ್ತಿಗಳ ಅಟ್ಟಹಾಸ, ಬಡ ರಾಷ್ಟ್ರಗಳ ಮೇಲಿನ ಆಕ್ರಮಣ, ಇವುಗಳೆಲ್ಲವೂ ಮಾನವ ಜನಾಂಗಕ್ಕೆ ಅಂಟಿಸಿರುವ ಶಾಶ್ವತ ಕಳಂಕಗಳು. ಚರಿತ್ರೆಯಲ್ಲಿ ಘಟಿಸಿರುವ ಇಂತಹ ಹೀನ ಕೃತ್ಯಗಳಿಂದ ಪಾಠ ಕಲಿಯಬೇಕಾದ ದೇಶಗಳು, ಈಗ ಕಲಿಯುತ್ತಿರುವ ಪಾಠವೇ ಬೇರೆ. ಚರಿತ್ರೆಯಲ್ಲಿ ಎಂದೋ ಆಗಿ ಹೋದ ದುಃಸ್ವಪ್ನಗಳಿಗೆ ಇಂದು ಪ್ರತೀಕಾರ, ದ್ವೇಷವನ್ನು ಬಯಸುವುದು ಒಪ್ಪುವ ನಡೆಯಲ್ಲ.

ಇಂತಹ ಮಾತುಗಳು ನಗುವನ್ನು ಉಕ್ಕಿಸುವ ವಿದೂಷಕನ ಮಾತುಗಳಂತೆ ಕಾಣುತ್ತವೆ. ಇಂತಹ ಕಾಳರಾತ್ರಿಯ ದಿನಗಳನ್ನು, ಅಧರ್ಮ, ಅನ್ಯಾಯ, ಅಶಾಂತಿಗಳೇ ಆವರಿಸಿಕೊಳ್ಳುತ್ತವೆ. ಇದನ್ನು ಜೈನರು 'ಅವಸರ್ಪಿಣಿ' ಕಾಲ ಎನ್ನುತ್ತಾರೆ. ವಾಸ್ತವ ಏನೆಂದರೆ, ಮೂಲ ಅಗತ್ಯಗಳಿಗಾಗಿ ಕೈಚಾಚುವ ಬಡವರ ಆತುರವನ್ನು ಯಾವ ಸೈನ್ಯವೂ ತಡೆಯಲಾಗುವುದಿಲ್ಲ! ಇದನ್ನು ಅರಿತು ಸಮತೋಲನದಿಂದ ದೇಶವನ್ನು ನಿರ್ವಹಿಸಬೇಕಿರುವುದು ಉತ್ತಮ ಮಾರ್ಗ.

ಚರಿತ್ರೆಯಲ್ಲಿ ನಡೆಯುವ ಪ್ರತಿಯೊಂದು ಘಟನೆಗಳಿಗೂ ಚಾರಿತ್ರಿಕ ಸಂದರ್ಭವಿರುತ್ತದೆ. ಅವೆಲ್ಲವೂ ಆ ಕಾಲದ ವಿದ್ಯಮಾನಗಳೊಂದಿಗೆ ತಳುಕು ಹಾಕಿಕೊಂಡಿರುತ್ತವೆ. ಹಾಗೂ ಅದರ ಪರಿಣಾಮ ಏನೆಂಬುದನ್ನು ಹೇಳುತ್ತವೆ. ಚರಿತ್ರೆಯನ್ನು ನಿರ್ಮಮಕಾರದಿಂದ ಗ್ರಹಿಸಿದಾಗ ಮಾತ್ರ, ಯಾರದೋ ತಪ್ಪಿಗೆ ಯಾರನ್ನೋ ಶಿಕ್ಷಿಸುವ ದೋಷಪೂರಿತ ಮನಸ್ಥಿತಿ ಇಲ್ಲವಾಗುತ್ತದೆ.

ಬುದ್ಧದೇವ ಅತ್ಯಂತ ಕುಶಲದಿಂದ ಇಂತಹ ಸಮಸ್ಯೆಯನ್ನು ಭಿಕ್ಕುವಿಗೆ ಘಟನೆಯ ಮೂಲಕ ಹೇಳಿದ. ಈ ಘಟನೆಯಲ್ಲಿ ಕೇಳಿಬರುವ ಬುದ್ಧದೇವನ ಮಾತುಗಳು ಇಂದಿಗೂ ಪ್ರಸ್ತುತವೆನಿಸುತ್ತದೆ. ಒಮ್ಮೆ, ಮಾಲುಂಕ್ಯಪುತ್ತ ಎನ್ನುವ ಭಿಕ್ಕು ಬುದ್ಧಭಗವಾನರ ಬಳಿಗೆ ಬಂದು ಕೆಲವು ಪ್ರಶ್ನೆಗಳನ್ನು ಕೇಳಿದ: 'ಜೀವ ಎಂದರೇನು? ಶರೀರವೆ ಅಥವಾ ಮತ್ತೊಂದೆ?' 'ಜಗತ್ತು ಶಾಶ್ವತವೇ? ಅಥವಾ ಅಶಾಶ್ವತವೇ?' 'ಜಗತ್ತು ಕೊನೆಯಿಲ್ಲದ್ದೇ? ಅಥವಾ ಮೊದಲಿಲ್ಲದ್ದೇ?' 'ತಥಾಗತನು ಸಾವನ್ನು ಮೀರಿದವನೆ ಅಥವಾ ಸಾವಿನ ಮಿತಿಯಲ್ಲಿರುವವನೆ?' ಭಗವಾನ್ ಈ ಪ್ರಶ್ನೆಗಳು ನನ್ನನ್ನು ಕಾಡುತ್ತಿವೆ. ಇವುಗಳಿಗೆ ತಥಾಗತನು ಸತ್ಯವನ್ನು ತಿಳಿಸಿದ್ದೇ ಆದರೆ ನಾನು ಸಂಘದಲ್ಲಿ ಉಳಿಯುತ್ತೇನೆ. ಇಲ್ಲವಾದರೆ ನಾನು ಸಂಘವನ್ನು ತೊರೆದು ಪ್ರಾಪಂಚಿಕ ಜೀವನಕ್ಕೆ ಮರಳುತ್ತೇನೆ ಎಂದು ಹೇಳಿದ.

ಭಿಕ್ಕು ಮಾಲುಂಕ್ಯಪುತ್ತನ ಪ್ರಶ್ನೆಗಳಿಗೆ ಬುದ್ಧದೇವ ಈ ರೀತಿಯಾಗಿ ಉತ್ತರಿಸಿದ. 'ಸಂಘವನ್ನು ಸೇರಿದವರಿಗೆ ಇಂಥ ವಿಚಾರಗಳನ್ನು ತಿಳಿಸಿ ಹೇಳುತ್ತೇನೆ ಎಂದು ನಾನು ಎಂದಾದರೂ ಹೇಳಿದ್ದೆನೆ?' 'ಇಲ್ಲ' ಎಂದ ಭಿಕ್ಕು. ಬುದ್ಧಭಗವಾನರು ಮುಂದುವರೆಸಿ: 'ಅಯ್ಯಾ, ಒಬ್ಬನಿಗೆ ಒಂದು ವಿಷದ ಬಾಣ ನಾಟಿದೆ. ಅವನ ಬಂಧು ಮಿತ್ರರು ಅವನನ್ನು ವೈದ್ಯನ ಬಳಿ ಕರೆದೊಯ್ಯುತ್ತಾರೆ. ಅಲ್ಲಿ ವಿಷದ ಬಾಣ ನಾಟಿದವನು, ನನಗೆ ನಾಟಿರುವ ಬಾಣವನ್ನು ಬಿಟ್ಟವನ ಹೆಸರೇನು? ಅವನ ಜಾತಿ ಯಾವುದು? ಅವನು ಕಪ್ಪು ಬಣ್ಣದವನೆ? ಅಥವಾ ಬಿಳಿಯ ಬಣ್ಣದವನೆ? ಎತ್ತರಕ್ಕಿದ್ದನೆ ಅಥವಾ ಕುಳ್ಳಗಿದ್ದನೆ? ಯಾವ ಬಿಲ್ಲಿನಿಂದ ಬಾಣ ಬಿಟ್ಟ? ಆ ಬಿಲ್ಲು ಡೊಂಕಾಗಿತ್ತೆ? ಅಥವಾ ಉದ್ದವಾಗಿತ್ತೆ? ಅದನ್ನು ಯಾವ ಜಾತಿಯ ಮರದಿಂದ ಮಾಡಲಾಗಿತ್ತು? ಅವನು ಹೂಡಿದ ಬಾಣದ ಮೊನೆಗೆ ಯಾವ ವಿಷವನ್ನು ಲೇಪಿಸಿದ್ದರು? ಬಾಣದ ಗರಿಗಳು ಯಾವ ಪಕ್ಷಿಯದು? ಇದನ್ನೆಲ್ಲಾ ತಿಳಿಸುವವರೆಗೂ ನಾನು ನನ್ನ ಶರೀರಕ್ಕೆ ನಾಟಿರುವ ಬಾಣವನ್ನು ಹೊರತೆಗೆಯಲು ಬಿಡುವುದಿಲ್ಲ. ಎಂದು ಹೇಳಿದರೆ, ವಿಷದ ಬಾಣ ನಾಟಿದವನು ಸಾಯಬಹುದೆ ಹೊರತು, ಅವನ ಪ್ರಶ್ನೆಗಳಿಗೆ ಉತ್ತರ ದೊರಕುವುದಿಲ್ಲ'.

2500 ವರ್ಷಗಳ ಹಿಂದೆ ಬುದ್ಧದೇವ ಹೇಳಿದ ಈ ಮಾತುಗಳನ್ನು ಇಂದಿನ ನಮ್ಮ ಬದುಕು ಮತ್ತು ರಾಜಕಾರಣಕ್ಕೆ ಹೊರಳಿಸಿಕೊಂಡರೆ, ನಮ್ಮ ವರ್ತಮಾನದಲ್ಲಿ ಕಾಡುತ್ತಿರುವ ಹಸಿವು, ಬಡತನ, ನಿರುದ್ಯೋಗ ಸಮಸ್ಯೆಗಳಿಗೆ ವರ್ತಮಾನದಲ್ಲೇ ಉತ್ತರ ಕಂಡುಕೊಳ್ಳಬೇಕೇ ಹೊರತು, ಈ ಸಮಸ್ಯೆಗಳಿಗೆಲ್ಲಾ ಭೂತಕಾಲದಲ್ಲಿ ನಡೆದ ಯಾವುದೊ ಘಟನೆಗಳೆ ಕಾರಣ ಎಂದು ಹೇಳುವುದು ಅನುಚಿತವಾದದ್ದು. ನಮ್ಮನ್ನು ವಿಮರ್ಶಾತ್ಮಕ ಚಿಂತನೆಗೆ ತೊಡಗಿಸುವ ಈ ಮಾತುಗಳನ್ನು ಅರಿಯುವುದರಲ್ಲೇ ಸಮಾಜದ ಹಿತವಿದೆ. ಈ ರೀತಿ ಮಾಡುವುದು ಮನೆಯಲ್ಲಿ ಕಳೆದುಕೊಂಡದ್ದನ್ನು, ಬೀದಿಯಲ್ಲಿ ಹುಡುಕಿದಂತೆ! ನಾವು ನೆನಪಿಡಬೇಕಾದದ್ದು ಏನೆಂದರೆ: ಭೂಮಿಯ ಮೇಲೆ ನಾವು ಕಾಣಬಯಸುವ ಆದರ್ಶ ಸಮಾಜ ಉದಯಿಸಬೇಕಾಗಿರುವುದು ಮನುಷ್ಯರ ಪ್ರಯತ್ನದಿಂದಲೇ ಹೊರತು ಇನ್ನಾವ ಹೊರಗಿನ ದಿವ್ಯ ಶಕ್ತಿಯಿಂದಲ್ಲ!

ಯೂನಿಯನ್ ಕಾರ್ಬೈಡ್‌ನಲ್ಲಿ ವಿಷಾನಿಲ ಸೋರಿಕೆಯಿಂದ ಅಸುನೀಗಿದ ಸಾವಿರಾರು ಕಾರ್ಮಿಕರ ಕುಟುಂಬಗಳು ಯಾರ ಮೇಲೆ ಹಗೆತನ ಸಾಧಿಸಬೇಕು! ಚೆರ್ನೊಬೈಲ್ ಅಣುವಿಕಿರಣದಿಂದ ಸತ್ತವರು, ಮೇಲುಸೇತುವೆ ಕುಸಿತದಿಂದ ಪ್ರಾಣತೆತ್ತ ಕುಟುಂಬದವರು, ಜಗತ್ತಿಗೆ ಯಾವ ಕೇಡೂ ಬಗೆಯದೆ ಗಾಜಪಟ್ಟಿಯಲ್ಲಿ ಗುಂಡಿನ ದಾಳಿಗೆ ಸಿಕ್ಕಿ ಮೃತಪಟ್ಟಿರುವ ಸಾವಿರಾರು ಹಸುಮಕ್ಕಳ ಪೋಷಕರು ಯಾರ ಮೇಲೆ ಪ್ರತೀಕಾರ ಸಾಧಿಸಬೇಕು? ಪ್ರತೀಕಾರ ಎನ್ನುವುದು ಪ್ರಾಣಿಗಳ ಜಗತ್ತಿನಲ್ಲಿ ಕೇಳರಿಯದ ಭಾಷೆ. ಅದು ಇರುವುದು ಕೇವಲ ಮನುಷ್ಯರ ನಡುವೆ ಮಾತ್ರ! ದ್ವೇಷ, ಪ್ರತೀಕಾರ ಎನ್ನುವುದು ನೆತ್ತರು, ಸಾವು, ನೋವು ಹಾಗೂ ದ್ವೇಷದ ವ್ಯಾಕರಣದಿಂದ ರೂಪುಗೊಂಡಿರುವ ಏಕರೂಪದ ಪೈಶಾಚಿಕ ಭಾಷೆ. ಇದನ್ನು ತೊರೆಯದ ಜಗತ್ತಿಗೆ ಭವಿಷ್ಯದಲ್ಲಿ ಒಳ್ಳೆಯ ದಿನಗಳು ಬರಲಾರವು.

ಇಂದು ದೇಶಪ್ರೇಮ, ಇತಿಹಾಸ, ವಿಜ್ಞಾನ, ಪರಿಸರ ಕುರಿತ ಜ್ಞಾನಸಂಯೋಜನೆಯ ವಿಧಾನಗಳು ಕ್ಷಿಪ್ರಗತಿಯಲ್ಲಿ ರೂಪಾಂತರಗೊಳ್ಳುತ್ತಿವೆ. ಇವುಗಳನ್ನು ಅರ್ಥೈಯಿಸುವ ವಿಧಾನಗಳೂ ಬದಲಾಗುತ್ತಿವೆ. ಇಂತಹ ಹೊತ್ತಿನಲ್ಲಿ ಎಲ್ಲರನ್ನೂ ಒಳಗೊಳ್ಳುವ, ಭಿನ್ನಾಭಿಪ್ರಾಯಗಳ ನಡುವೆಯೂ ಎಲ್ಲರನ್ನೂ ಸಮಾನವಾಗಿ ತಗೆದುಕೊಂಡು ಹೋಗುವುದರಲ್ಲೇ ಒಂದು ದೇಶದ ಸೌಂದರ್ಯ ಅಡಗಿರುತ್ತದೆ. ಇದು ಬಹುತ್ವದ ಸಮಾಜವನ್ನು ಒಳಗೊಳ್ಳುವ ಪ್ರಜಾಪ್ರಭುತ್ವ ವ್ಯವಸ್ಥೆ ತೋರುವ ನಿಜ ದರ್ಶನ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಎನಿತು ಇನಿದು ಈ ಕನ್ನಡ ನುಡಿಯು ಮನವನು ತಣಿಸುವ ಮೋಹನ ಸುಧೆಯು.

  —ಆನಂದಕಂದ

- ನಮ್ಮ ಗ್ರಂಥರಾಶಿಯೆಲ್ಲವೂ ಬರಿಯ ಜಳ್ಳಲ್ಲ. ಅದರಲ್ಲಿ ಕಾಳೂ ಇವೆ. ಅಷ್ಟೇ ಅಲ್ಲ, ಶ್ರೇಷ್ಠವಾದ ಬೀಜದ ಕಾಳೂ ಇವೆ.

  —ಟಿ.ಎಸ್. ವೆಂಕಣ್ಣಯ್ಯ

- ಮನುಷ್ಯನಿಗೆ ಕೋಪಕ್ಕೆ ಸಮನಾದ ಶತ್ರು ಲೋಕದಲ್ಲಿ ಯಾವುದುಂಟು?

  —ನೀತಿ

- ಮನೆಯೆಂಬುದು ಹುಡುಗಿಯರಿಗೆ ಪಂಜರ, ಹೆಂಗಸರಿಗೆ ಕಾರ್ಖಾನೆ.

  —ಜಾರ್ಜ್ ಬರ್ನಾರ್ಡ್ ಶಾ

- ಉತ್ಸಾಹಕ್ಕಿಂತ ಮಿಗಿಲಾದ ಬಲವಿಲ್ಲ. ಉತ್ಸಾಹದಿಂದ ಆರಂಭ ಮಾಡಿದರೆ ಸಾಕು ಸಕಲ ಸಂಪತ್ತುಗಳು ಉಂಟಾಗುತ್ತವೆ.

  —ರಾಮಾಯಣ

- ಭಯಗಳಲ್ಲೆಲ್ಲ ಸಂಬಂಧಿಗಳಿಂದ ಉಂಟಾಗುವ ಭಯವೇ ಕ್ರೂರ.

  —ಬೃಹಸ್ಪತಿ